ಉ) ಬಂದಿದೆ. ತಾರತಮ್ಯವಿದ್ದಾಗ್ಯೂ, ಗ್ರಾಮೀಣ ಪ್ರದೇಶದಲ್ಲಿ ಹಸಿರು ಕಾರ್ಡಿಗೆ ವಿತರಿಸುವ ಅಕ್ಕಿಯು ಹೆಚ್ಚಿನ ಸಹಾಯಧನಯುಕ್ತವಾದ್ದರಿಂದ, ಗ್ರಾಮೀಣ ಪ್ರದೇಶಕ್ಕೆ ಅನ್ಯಾಯ ವಾಗುತ್ತಿಲ್ಲ. ಆದ್ದರಿಂದ ಕ್ರಮ ಅಗತ್ಯವಿಲ್ಲ.

ಪ್ರಕಟಣೆ

ಅಧ್ಯಕ್ಷರು.—ದಿನಾಂಕ ೩೦-೫-೧೯೮೮ರಂದು ಸಂತಾಪ ಸೂಚನಾ ಕಲಾಪ ಇದ್ದುದರಿಂದಾಗಿ ಆ ದಿನ ಸದನದಲ್ಲಿ ಉತ್ತರಿಸುವ ೩ಳನೇ ಪ್ರಶ್ನೆ ಪಟ್ಟಿ, ಉತ್ತರ ಲಿಖಿತ ಪ್ರಶ್ನೆ, ಉತ್ತರ ಹಾಗೂ ತಡೆ ಹಿಡಿಯಲಾದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

೩ಳನೇ ಪಟ್ಟಿಯಂ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಕಡೂರು ತಾಲ್ಲೂಕಿನ ನೀರಾವರಿ ಸೌಲಭ್ಯ

೨೦೩೩. ಶ್ರೀ ಪಿ. ಪಿ. ಓಂಕಾರ ಮೂರ್ತಿ (ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲಾ ಕಡೂರು ತಾಲ್ಲೂಕಿನಲ್ಲಿ ಕಳೆದ ಸುಮಾರು ವರ್ಷದಿಂದ ಸರಿಯಾಗಿ ಮಳೆಬಾರದ ಪ್ರಯುಕ್ತ ಬರಗಾಲಕ್ಕೆ ತುತ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಸದರಿ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳುವರೇ.

ಇ) ಯಗಚಿ ನದಿಯಿಂದ ಕಡೂರು ತಾಲ್ಲೂಕಿಗೆ ಎಡದಂಡೆ ನಾಲ್ಕನೆಮಾಡಿದ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಅನ್ವೇಷಣೆಯಲ್ಲಿರುವ ಭದ್ರಾ ಮೇಲ್ದಂಡೆ ಯೋಜನೆಯಿಂದ ಕಡೂರು ತಾಲ್ಲೂಕಿನ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಸಲಹೆ ಪರಿಶೀಲನೆಯಲ್ಲಿದೆ.

ಇ) ಯಗಚಿ ನದಿಯಲ್ಲಿ ದೊರೆಯುವ ನೀರು ತನ್ನ ಕೊಳದ ನೀರಿನ ಅವಶ್ಯಕತೆ ಪೂರೈಸಲು ಮಾತ್ರ ಸಾಕಾಗುವುದು. ಕೃಷ್ಣ ಜಲಾನಯನ ಪ್ರದೇಶದಲ್ಲಿರುವ ಕಡೂರು ತಾಲ್ಲೂಕಿಗೆ ಯಗಚಿ ನೀರೊದಗಿಸಲು ಸಾಧ್ಯವಾಗದು.

ತುಮಕೂರು ಜಿಲ್ಲೆ ಶಿರಾ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ

೧೬೯೧. ಶ್ರೀ ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾ ಪಟ್ಟಣದಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ, ಸುಮಾರು ಮೂರು ಸಾವಿರ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು ಸದರಿ ಕಾಲೇಜಿನಲ್ಲಿ ಸ್ಥಳದ ಅಭಾವ ವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತೊಂದರೆಯನ್ನು ನಿವಾರಿಸಲು ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು ?